# ಶೋಷಣೆಯ ವಿರುದ್ಧದ ಪ್ರತಿರೋಧ ಕಾವ್ಯ ರ್‍ಯಾಪ್

ರ್‍ಯಾಪರ್ ಆಗಿ ಎತ್ತರಕ್ಕೇರಬೇಕು ಎಂಬ ಕನಸಿನ ಹುಡುಗ ಸಿದ್ಧಾರ್ಥ್ ವಿಜ್ಞಾನದಲ್ಲಿ ಪದವೀಧರ. ಸದ್ಯ ಹಣದ ಅಗತ್ಯಕ್ಕೆ ಉದ್ಯೋಗ ಮಾಡಿದರೂ ಭವಿಷ್ಯದಲ್ಲಿ ಸಂಪೂರ್ಣ ರ್‍ಯಾಪ್ ಸಂಗೀತಕ್ಕೆ ತಮ್ಮನ್ನು ಒಡ್ಡಿಕೊಳ್ಳುವ ಆಸೆ ಅವರದು.

■ ರಾಘವೇಂದ್ರ ಕೆ. ತೊಗರ್ಸಿ



◆ **ರ್‍ಯಾಪ್ ರಚಿಸಲು ನಿಮಗೆ ಪ್ರೇರಣೆ ಸಿಕ್ಕಿದ್ದು ಹೇಗೆ?**

ರ್‍ಯಾಪ್ ಸಾಹಿತ್ಯ ಇಂಗ್ಲಿಷ್‌ನಲ್ಲಿ ಮೊದಲು ಆರಂಭವಾಯಿತು. ಕಪ್ಪು ಜನಾಂಗವೇ ಇದಕ್ಕೆ ಮೂಲ ಎಂದು ಅನ್ನಿಸುತ್ತದೆ. ಇದರ ಉದ್ದೇಶ ಪ್ರತಿಭಟನೆಯನ್ನು ವ್ಯಕ್ತಪಡಿಸುವುದೇ ಆಗಿತ್ತು. ಅಂದರೆ ರ್‍ಯಾಪ್ ಅನ್ನು 'ಪ್ರತಿರೋಧ ಕಾವ್ಯ' ಎಂದು ನಾವು ಕರೆಯಬಹುದು. ಬಿಳಿಯರು ನಡೆಸುತ್ತಿದ್ದ ದೌರ್ಜನ್ಯಕ್ಕೆ ವಿರೋಧವನ್ನು ಕಪ್ಪು ಜನ 'ಪದ'ಗಳ ಮೂಲಕ ಹೊರ ಹಾಕುತ್ತಿದ್ದರು. ಅದುವೇ ರ್‍ಯಾಪ್, ಪ್ರತಿಭಟನಕಾರನೇ ರ್‍ಯಾಪರ್. ಕ್ರಮೇಣ ಈ ಮಾದರಿ ಬೇರೆ ಬೇರೆ ಆಯಾಮದಲ್ಲಿ ಅಭಿವ್ಯಕ್ತಗೊಂಡಿರುವುದರಿಂದ ಭಿನ್ನ ರೂಪಗಳು ಬಂದಿವೆ ಅನ್ನಿಸುತ್ತದೆ. ನನ್ನ ಈ ಹವ್ಯಾಸಕ್ಕೆ ಪ್ರೇರಣೆ ಅಂತ ನಿರ್ದಿಷ್ಟವಾಗಿ ಹೇಳುವುದು ಕಷ್ಟ.

ನನಗೆ ಇದೇನೂ ಗೊತ್ತಿರಲಿಲ್ಲ. ಪ್ರೌಢಶಾಲೆಯಲ್ಲಿದ್ದಾಗ ಚಿಕ್ಕ ಚಿಕ್ಕ ಪದ್ಯಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಬರೆಯುತ್ತಿದ್ದೆ. ಕನ್ನಡ ಪದ್ಯಗಳನ್ನು ನಾನೇ ಹಾಡಲು ಶುರು ಮಾಡಿದೆ. ಇದನ್ನು ಕೇಳಿದ ಯಾರೋ ಅದನ್ನು 'ರ್‍ಯಾಪ್' ಅಂತಾರೆ ಎಂದರು. ಬರೆಯುವ ಹವ್ಯಾಸವನ್ನು ಮುಂದುವರಿಸಿದೆ. ಕವಿತೆಯನ್ನು ಓದುವುದಕ್ಕಿಂತ ಕೇಳುವವರು ಹೆಚ್ಚಿದ್ದಾರೆ ಅನಿಸಿತು. ಆ ಅನಿಸಿಕೆ ನನಗೆ 'ಬರೆಯಬೇಕು, ಹಾಡಬೇಕು' ಎನ್ನುವ ಹುಮ್ಮಸ್ಸು ಮತ್ತು ಪ್ರೇರಣೆ ನೀಡಿತು. ರ್‍ಯಾಪ್ ಪದ್ಯಗಳನ್ನು ಹಾಡುವ ವೇಗ ಹೆಚ್ಚಿದ್ದರೂ ಸುಲಭವಾಗಿ ಕೇಳುಗರ ಮನದಾಳಕ್ಕೆ ಇಳಿಯುತ್ತವೆ. ಕೇಳುಗರು ತಮ್ಮ ಜೀವನಕ್ಕೂ ಅದನ್ನು ಅನ್ವಯಿಸಿಕೊಂಡು ನೋಡುತ್ತಾರೆ. ಹಾಗಾಗಿ ಈ ಪ್ರಕಾರದ ಬರಹ ಹೆಚ್ಚು ಜನಪ್ರಿಯತೆಯನ್ನು ಇತ್ತೀಚೆಗೆ ಪಡೆಯುತ್ತಿದೆ ಎಂದೆನಿಸುತ್ತದೆ.

◆ **ನಿಮ್ಮ ಬರಹದ ಸ್ವರೂಪದ ಬಗ್ಗೆ ಹೇಳಿ?**

ನಾನು ಆಡುಮಾತಿನಲ್ಲಿಯೇ ಹಾಡನ್ನು ಬರಿಯುತ್ತೇನೆ. ಒಮ್ಮೆ ಕೇಳಿದರೆ ಮತ್ತೊಮ್ಮೆ ಕೇಳಬೇಕು ಎಂದೆನಿಸುವಂತೆಯೇ ಬರೆಯಬೇಕು ಎನ್ನುವುದು ನನ್ನ ಆಸೆ. ಪಿಯುಸಿ ಓದುವ ಸಮಯಕ್ಕೆ ಕನ್ನಡದಲ್ಲಿ ಭಾಷಾ ಪ್ರೌಢಿಮೆ ಹೆಚ್ಚಿದೆ ಎನ್ನುವುದು ಮನವರಿಕೆ ಆಯಿತು. ಆದ್ದರಿಂದ ಕನ್ನಡದಲ್ಲಿಯೇ ಬರಹವನ್ನು ಮುಂದುವರಿಸಿದೆ. ಪಿಯು ಮುಗಿಯುವ ಹೊತ್ತಿಗೆ ಓದಿನಲ್ಲಿ ಆಸಕ್ತಿ ಕಡಿಮೆ ಆಯ್ತು. ಬೇರೆ ಬೇರೆ ವಿಷಯಗಳಲ್ಲಿ ಬರೆಯಬೇಕೆಂದು ಸಂಕಲ್ಪ ಮಾಡಿದೆ. ಅದಕ್ಕಾಗಿ ಬೇರೆ ಬೇರೆ ಟ್ಯೂನ್ ಕೂಡ ಕಲಿತೆ. ಬಿ.ಎಸ್‌ಸಿ. (ಬಯೊಟೆಕ್) ಪದವಿಗೆ ಒಲ್ಲದ ಮನಸ್ಸಿನಿಂದಲೇ ಸೇರಿದೆ. ಪ್ರಸ್ತುತ ಪದವಿ ಪಡೆದು, ಕಂಪನಿಯೊಂದರ ಕೆಲಸದ ನಿರೀಕ್ಷೆಯಲ್ಲಿದ್ದೇನೆ. ನನ್ನ ಹವ್ಯಾಸಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ್ದೇನೆ. ಪದವಿ ಮೊದಲ ವರ್ಷದಲ್ಲಿ ಒಂದು ಹಾಡನ್ನು ವಿಡಿಯೊ ಶೂಟ್ ಮಾಡಿಸಿದೆ. ಅದಕ್ಕೆ ನಮ್ಮ ತಂದೆಯೇ ಹಣ ನೀಡಿದರು.

ಬೆಂಗಳೂರಿನ ಯಲಹಂಕ ಸಮೀಪದ ಪಾಳ್ಯದಲ್ಲಿಯೇ ನಾನು ಹುಟ್ಟಿ ಬೆಳೆದಿದ್ದು. ಅಪ್ಪ ಟೈಲರ್ ಆಗಿದ್ದಾರೆ. ತಾಯಿ ಗೃಹಿಣಿ. ಅಂತರ